# ಕುತ್ತು



ಎರಡು ರಸ್ತೆಗಳು T ಆಕಾರದಲ್ಲಿ ಸೇರುವ ಜಾಗದಲ್ಲಿ T ಅಕ್ಷರದ ತಳವನ್ನು ಪ್ರತಿನಿಧಿಸುವ ರಸ್ತೆಯು T ಅಕ್ಷರದ ಮೇಲ್ಭಾಗವನ್ನು ಪ್ರತಿನಿಧಿಸುವ ರಸ್ತೆಯನ್ನು ಕೂಡುವ ಸ್ಥಳಕ್ಕೆ ಎದುರಾಗಿರುವ ನಿವೇಶನಕ್ಕೆ ಕುತ್ತು ಇದೆ ಎನ್ನುತ್ತದೆ ವಾಸ್ತುಶಾಸ್ತ್ರ. ಇಂತಹ ನಿವೇಶನಗಳನ್ನು ನೋಡಿದಾಕ್ಷಣ ವಾಸ್ತುಶಾಸ್ತ್ರದವರು ಹೌಹಾರಿ, ಎರಡು ಅಡಿ ಹಿಂದಕ್ಕೆ ಚಿಮ್ಮಿ, ಒದ್ದಂಡಿ, ಒದಲೇಯಂಡಿ ಎನ್ನುವುದು ಸಾಮಾನ್ಯ. ಆದರೆ ಅದೇ ನಿವೇಶನ ಬಿ.ಡಿ.ಎ.ಇಂದ ನೀಡಲ್ಪಟ್ಟರೆ ಅದಕ್ಕೊಂದು ಪರಿಹಾರ ಸೂಚಿಸುತ್ತಾರೆ. ಗಣೇಶುಡು ವಿಗ್ರಹಾನಿ ಪೆಟ್ಟಂಡಿ ಎನ್ನುತ್ತಾ ವಿಘ್ನವಿನಾಶಕನಾದ ಗಣೇಶನ ಪ್ರತಿಮೆಯನ್ನೋ, ಚಿತ್ರವನ್ನೋ ರಸ್ತೆಗೆ ಎದುರಾಗಿರುವ ಕಾಂಪೌಂಡಿನ ಮಧ್ಯಭಾಗದಲ್ಲಿ ಇರಿಸುತ್ತಾರೆ. ಇಂತಹ ಗಣೇಶನಿಗೆ ದಿನವೆಲ್ಲಾ ಮನೆ ಕಾಯುವ ವಾಚ್‌ಮನ್ ಡ್ಯೂಟಿ ಆದರೂ, ಪೂಜೆ ಮಾತ್ರ ಸೊನ್ನೆ! ಇದನ್ನು ಮನಗಂಡ ಕೆಲವು ಸಮಯಸಾಧಕರು ಇಂತಹ ರೋಡ್‌ಹಿಟ್ ಗಣೇಶಗಳ ಪೂಜೆಯನ್ನೇ ತಮ್ಮ ಬದುಕಾಗಿಸಿಕೊಂಡಿರುವ ಉದಾಹರಣೆಗಳಿವೆ.

ಕುತ್ತು ಆಂಧ್ರವಾಸ್ತುಶಾಸ್ತ್ರದವರು ನಮ್ಮ ಮೇಲೆ ಹೇರಿರುವ ಮತ್ತೊಂದು ಅನಿಷ್ಟ. ಇದಕ್ಕೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ನಮ್ಮ ಯಾವುದೇ ಹಳ್ಳಿಯಲ್ಲಿ ಪಟೇಲರ ಮನೆ, ಗೌಡರ ಬಂಗಲೆ, ದೇವಸ್ಥಾನಗಳು, ಇತ್ಯಾದಿಗಳು ಊರ ಮುಖ್ಯರಸ್ತೆಯ ಎದುರಿನ ಭಾಗದಲ್ಲಿಯೇ, ರೋಡ್ ಹಿಟ್ ಮಾದರಿಯಲ್ಲಿಯೇ ಇರುತ್ತಿದ್ದು, ಅವರ ಬದುಕು ಚೆನ್ನಾಗಿಯೇ ಇರುತ್ತಿದ್ದುದು ವಿದಿತವೇ. ರಾಜ ಮಹಾರಾಜರ ಅರಮನೆಗಳೂ ರಸ್ತೆಗಳು ಕೂಡುವ ಜಾಗದಲ್ಲಿ ಇರುತ್ತಿದ್ದು, ರಾಜರ ವೈಭವಕ್ಕೆ ಇವು ಯಾವುದೇ ಕುತ್ತನ್ನು ತಂದಿರಲಿಲ್ಲ. ರಾಜರಿಂದ ಪಟೇಲರವರೆಗೆ ಯಾರಿಗೂ ಕೇಡಾಗದ ಈ ಕುತ್ತು ಈಗ ಮಾತ್ರ ಕೇಡುಂಟುಮಾಡುವುದು ಎನ್ನುವುದು ನಿರಾಧಾರ.

ಹಾಂ! ಒಂದು ಕಾರಣವಂತೂ ಸಮಂಜಸ. ನಗರದಲ್ಲಿ ಕಳ್ಳರು ಹೆಚ್ಚು. ಈ ಕಳ್ಳರು ಮನೆಗಳನ್ನು ಗಮನಿಸಿ, ಮನೆಯವರ ಚಲನವಲನಗಳನ್ನು ಅರಿತು, ಕಳ್ಳತನ/ದರೋಡೆ ಮಾಡುವುದು ತಿಳಿದಂತಹ ಸಂಗತಿಯೇ. ರಸ್ತೆಯ ಎದುರಿಗೆ ಈ ವಿಧವಾಗಿ ಕುತ್ತಿನ ಜಾಗದಲ್ಲಿದ್ದರೆ, ರಸ್ತೆಯ ಆ ತುದಿಯಿಂದ ಬೈನಾಕ್ಯುಲರ್ ಹಿಡಿದು ಮಲಗುವ ಕೊಠಡಿಯವರೆಗೆ ಗಮನಿಸುವುದು ಸಾಧ್ಯ. ಇದನ್ನು ಹತ್ತಿಕ್ಕಬೇಕಾದರೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಬಹುದು:

ಎದುರಿನ ರಸ್ತೆಯಲ್ಲಿ ನಿಂತವರಿಗೆ ಕಾಣದಂತೆ ಒಂದು ಪಾರ್ಶ್ವಕ್ಕೆ ಮುಂಬಾಗಿಲನ್ನು ಇಡುವುದು.

ಕಾಂಪೌಂಡನ್ನು ವೀಕ್ಷಣಾನುಕೂಲಕರ ಮಟ್ಟಕ್ಕಿಂತಲೂ ಹೆಚ್ಚಾಗಿರಿಸುವುದು.

ಮುಂದಿನ ಭಾಗದಲ್ಲಿನ ಕಿಟಕಿಗಳನ್ನು louver ರೀತಿಯಲ್ಲಿ ಇಡುವುದು.

ಮುಂಭಾಗದ ಕಿಟಕಿಗಳಿಗೆ ಒನ್–ವೇ ಗ್ಲಾಸ್ ಅಳವಡಿಸುವುದು.

ಮನೆಯ ಮುಂಭಾಗದ ಎಲ್ಲಾ ಚಲನವಲನಗಳನ್ನು ಸೆರೆಹಿಡಿಯುವ ಕ್ಯಾಮರಾ ಅಳವಡಿಸುವುದು.

ಮುಂಭಾಗದ ಕಿಟಕಿಗಳನ್ನು 45 ಡಿಗ್ರಿ ಕೋನದಲ್ಲಿ ಇರಿಸುವುದು.

ಈ ವಿಧಗಳನ್ನು ಅನುಸರಿಸುವುದರಿಂದ ಕಳ್ಳರು ಮನೆಯನ್ನು ಗಮನಿಸುವುದು ದುಃಸಾಧ್ಯವಾಗುತ್ತದೆ.

ಕೆಲವರು ಇಂತಹ ಮನೆಗಳಿಗೆ ಕಾರು, ಲಾರಿಗಳು ಢಿಕ್ಕಿ ಹೊಡೆದು ಕಾಂಪೌಂಡ್ ಜಖಂ ಆಗುವ ಸಾಧ್ಯತೆ ಇದೆ ಎನ್ನುತ್ತಾರೆ. ಅವರ ವಾದ ಸರಿಯೇ; ಆದರೆ ಮುಂದಿನ ಮೋರಿಯನ್ನು ದಾಟಿ ವಾಹನಗಳು ಕಾಂಪೌಂಡನ್ನು ಜಖಂ ಮಾಡುವುದು ಕಷ್ಟ. ಹಾಗೆ ನೋಡಿದರೆ ಮೂಲೆಯ ನಿವೇಶನಗಳು ಕುತ್ತಿನ ನಿವೇಶನಗಳಿಗಿಂತಲೂ ಹೆಚ್ಚಾಗಿ ಜಖಂ ಆಗುವ ಸಾಧ್ಯತೆಯಿರುತ್ತದೆ. ಆದರೆ ವಾಸ್ತುವಿನ ಈ ಕುತ್ತೇಶ್ವರರು ಕಾರ್ನರ್ ಸೈಟ್‌ಗಳ ಬಗ್ಗೆ (ಆಗ್ನೇಯ ಬೇಡವೆನ್ನುತ್ತಾರೆ, ಅದರ ಬಗ್ಗೆ ಮತ್ತೊಮ್ಮೆ ಬರೆಯುತ್ತೇನೆ) ಚಕಾರವೆತ್ತದೆ ಕುತ್ತಿನ ಬಗ್ಗೆ ಅಪರಿಮಿತವಾದ ಭಯ ಹುಟ್ಟಿಸುತ್ತಾರೆ. ಆದರೆ ಕೆಲವು ವಾಸ್ತುಶಾಸ್ತ್ರಜ್ಞರು ರಸ್ತೆಯು ಉತ್ತರದ ಅಂಚಿಗೆ ಇದ್ದರೆ ಪರವಾಗಿಲ್ಲ ಎಂದೋ, ಕುಬೇರನ ಮೂಲೆಗೆ ಇದ್ದರೆ ಮಂಚಿದಿ ಎಂದೋ ತಿಪ್ಪೆ ಸಾರಿಸುವ ಕೆಲಸ ಮಾಡುತ್ತಾರೆ. ವಾಸ್ತವವಾಗಿ ಇಂತಹ ನಿವೇಶನಗಳನ್ನು ಕೊಂಡರೆ ಯಾವುದೇ ವಿಧವಾದ ತೊಂದರೆಯೂ ಇಲ್ಲ. ಮನಃಸಂತೋಷಕ್ಕಾಗಿ ಗಣೇಶನ ವಿಗ್ರಹವನ್ನು ಸ್ಥಾಪಿಸಬಹುದಾದರೂ ಅದರಿಂದ ವಿಶೇಷ ಪರಿಣಾಮಗಳೇನೂ ಆಗುವುದಿಲ್ಲ. ಎದುರಿಗೆ ದೇವನ ಪ್ರತಿಮೆ ಕಂಡರೆ ಮನೆಯ ಎದುರಿನ ರಸ್ತೆಯ ಕಡೆಯಿಂದ ಬರುವವನು ದೇವನನ್ನು ನೋಡಲೆಂದು ಸ್ವಲ್ಪ ಸ್ಲೋ ಮಾಡುವನು ಎಂಬುದು ಮೊದಲಿಗೆ ನಿಜವಾಗಿತ್ತಾದರೂ, ಈಗ ಎಲ್ಲಾ ರೋಡ್ ಹಿಟ್ ಗಳಲ್ಲೂ ಗಣೇಶ ಇರುವುದರಿಂದ ಅದರತ್ತ ಗಮನ ಹೋಗುವುದು ಕಡಿಮೆಯಾಗಿದೆ.

ಕುತ್ತಿನ ಮತ್ತೊಂದು ಸ್ವರೂಪ ಒಳಕುತ್ತು. ಎಂದರೆ ಒಂದು ಬಾಗಿಲಿನ ಎದುರಿಗೆ ಇನ್ನೊಂದು ಬಾಗಿಲು ಇರಬೇಕು ಅಥವ ಗೋಡೆ ಇರಬೇಕು ಎಂಬುದು. ಉದಾಹರಣೆಗೆ ವರಾಂಡದ ಮುಂಬಾಗಿಲಿನ ಅಳತೆಗೆ ಸರಿಯಾಗಿ ವರಾಂಡದಿಂದ ಹಾಲ್‌ಗೆ ಹೋಗುವ ಬಾಗಿಲೂ ಇರಬೇಕೆಂಬುದು. ಮುಂಬಾಗಿಲು ಮೂರೂವರೆ ಅಡಿ ಅಗಲದ್ದಾಗಿದ್ದರೆ ಒಳಬಾಗಿಲೂ ಅದೇ ಅಳತೆಯದ್ದಾಗಿರಬೇಕು. ಒಂದು ವೇಳೆ ಆ ಬಾಗಿಲು ಮೂರು ಅಡಿಗಳಿದ್ದರೆ ಆರು ಇಂಚು ಕುತ್ತು ಬಂದಿದೆ, ಮಂಚಿದಿ ಕಾದು, ಎನ್ನುತ್ತಾರೆ. ಅಂತೆಯೇ ಬಾಗಿಲಿನ ಎದುರಿನ ಭಾಗದ ಗೋಡೆಯಲ್ಲಿ ಇಟ್ಟ ಕಿಟಕಿ ಬಾಗಿಲ ಅಗಲವನ್ನು ಬಿಟ್ಟು ಇಡಲ್ಪಡಬೇಕು, ಕಿಟಕಿಯ ಅರ್ಧಾಂಶ ಬಾಗಿಲಿನ ಹೊರಗೆ ನಿಂತವರಿಗೆ ಕಂಡರೆ ಕುತ್ತು!

ಹಳೆಯ ಕಾಲದ ಸಾವಿರಾರು ಮನೆಗಳನ್ನು ನೋಡಿದಾಗ ಈ ಕುತ್ತುಗಳನ್ನು ಹೊಂದಿದ್ದೂ ಸುಖ, ಸಂತೋಷ, ನೆಮ್ಮದಿಗಳಿಂದ ಜೀವಿಸಿದ್ದು ಕಂಡುಬರುತ್ತದೆ. ಹೌದು, ಆದರೆ ಕುತ್ತು ಇಲ್ಲದಿದ್ದರೆ ಇನ್ನೂ ಚೆನ್ನಾಗಿರುತ್ತಿದ್ದರು ಎಂಬುದು ಭಂಡ ವಾದವಷ್ಟೆ.

ಕುತ್ತು ಎಂದೂ ತಾರದು ಆಪತ್ತು. ಮೇಲ್ಕಾಣಿಸಿದ ಸೂತ್ರಗಳನ್ನು ಅಳವಡಿಸಿ ರೋಡ್ ಹಿಟ್ ನಿವೇಶನದಲ್ಲೂ ಸುಖವಾಗಿ ಸಂಸಾರ ಮಾಡಬಹುದು. ಹೊಸ ವರ್ಷದಲ್ಲಿ ಹೊಸ ನಿವೇಶನ ಕೊಳ್ಳುವಾಗ ನಿರ್ಭೀತರಾಗಿ ಕೊಳ್ಳಿರಿ. ಅನುಮಾನಮೇ ಪೆದ್ದ ರೋಗಂ, ಧೈರ್ಯಂ ಸರ್ವತ್ರ ಸಾಧನಂ ಎಂಬುದೊಂದೇ ನಿಮ್ಮ ಮಂತ್ರವಾಗಲಿ.

■ ವೈ–ಚಾರಿ